ಶ್ರೀ ಕೆ. ಎ. ಬೈರೇಗೌಡ.—ಕಾಡು ಎಷ್ಟು ಪ್ರದೇಶ ಇರಬೇಕೋ ಅಷ್ಟು ಇದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಇಲ್ಲ.

ಶ್ರೀ ಕೆ. ಎ. ಬೈರೇಗೌಡ.—ಈ ರೀತಿ ಸಾಗು ಮಾಡುವುದಕ್ಕೆ ಜಮೀನು ಕೊಡುತ್ತಾ ಹೋದರೆ ಕಾಡು ಕಡಮೆಯಾಗಿ ದೇಶದಲ್ಲಿ ಕಾಡು ಇಲ್ಲದಂತೆ ಆಗುವುದಿಲ್ಲವೇ ?

ಶ್ರೀ ಕೆ. ಎಫ್. ಪಾಟೀಲ್.—ಶ್ರೀ ಬೈರೇಗೌಡರು ಹೇಳುವ ಮಾತು ನಿಜ ಇದೆ.

Mr. SPEAKER.—Question time is over.

Sri M. C. NARASIMHAN (Kolar Gold Fields).—I want to bring one point to your notice.

Mr. SPEAKER.—If any Hon. Member wants to raise any new point or issue, that has to be brought to my notice before the Hon'ble Member raises it here.

Sri M. C. NARASIMHAN.—Supposing something occurs suddenly .....

1-30 P.M.

There is still half an hour left for the question hour to close. I thought I could bring to your notice a matter concerning the business of the day.

Mr. SPEAKER.—The Member should have brought this matter to my attention beforehand. He cannot take me by surprise. I have made it clear several times that a matter of which I have not been told previously cannot be raised on the floor of the House.

Sri M. C. NARASIMHAN.—It pertains to the business of the House.

Mr. SPEAKER.—I know what it is. I will give an explanation.

[ಅಷ್ಟು ಹೊತ್ತಿಗೆ ಶ್ರೀಮತಿ ಲಕ್ಷ್ಮಿದೇವಮ್ಮನವರು ಸಭೆಗೆ ಬಂದು ತಮ್ಮ ಪ್ರಶ್ನೆಯನ್ನು ಚರ್ಚೆಗೆ ತೆಗೆದು ಕೊಳ್ಳಬೇಕೆಂದು ಕೇಳಿದರು.]

ಅಧ್ಯಕ್ಷರು. ಈಗೇನೋ ಒಂದೂವರೆ ಗಂಟೆ ಮೇಲೆ 3 ನಿಮಿಷಗಳಾಗಿವೆ. ಪ್ರಶ್ನೆಗಳನ್ನು ಕೇಳ ತಕ್ಕ ಅವಧಿಯೇನೋ ಇನ್ನೂ ಇವೆ. ಆದರೆ ನಿನ್ನೆಯ ದಿನವೇ ಈ ಹೊತ್ತು ಪ್ರಶ್ನೋತ್ತರ ಚರ್ಚೆಯನ್ನು ಕೇವಲ ಅರ್ಧಗಂಟೆಯಲ್ಲೇ ಮುಗಿಸಬೇಕೆಂಬ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಬಹುಃ ಆಗ್ಗೆ ಮಾನ್ಯ ಸದಸ್ಯರಿಗೆಯವರು ಸಭೆಯಲ್ಲಿ ಹಾಜರಿರಲಿಲ್ಲ ವೆಂದು ಕಾಣುತ್ತದೆ. ಆದರೆ ಅವರೀಗ ತಾನೆ ಬಂದಿದ್ದಾರೆ. ಅವರ ಪ್ರಶ್ನೆಯನ್ನು ಹಾಕತಕ್ಕ ಪಕ್ಷ ಅವರಿಗಿದೆ. ಅವರು ಇಷ್ಟಪಟ್ಟರೆ ಅದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

Implementation of Family Planning Scheme.

*Q.—209. Smt. LAKSHMIDEVI RAMANNA (Chamarajapet).—

Will the Government be pleased to state :—

the facilities provided by them to implement the family planning scheme successfully in rural areas and among poor families ?

A.—Sri K. K. HEGDE (Minister for Health).—

Thirty Rural Family Planning Centres have been started in the State, apart from the 13 Urban Centres. Sheaths and foam tablets are being distributed free for the public in the Rural Clinics, without reference to their income and all other kinds of approved contraceptives are distributed by the Rural Clinics, free to people with income below Rs. 100 per month and at half price to those with income between Rs. 100 to 200 per month. Instructions have been issued to the concerned officers to arrange for Vesicotomy camps in rural areas where 25 or more persons are willing to undergo the operation. Social workers have been appointed in the Rural Family Planning Centres to educate the people in family planning.

ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣ.—ಈಗ ತಾವು ತಿಳಿಸಿರುವಂತಹ ಉತ್ತರಕ್ಕನುಗುಣವಾಗಿ ಎಷ್ಟು ಪರ್ಸೆಂಟೇಜ್ ನಂತಾನ ನಿರೋಧವನ್ನು ಜಾರಿಗೆ ತರಲಾಗಿದೆ ಎನ್ನುವುದನ್ನು ತಿಳಿಸುತ್ತೀರಾ ?

Sri K. K. HEGDE.—We have not assessed so far.

ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣ.—ಗ್ರಾಮಗಳಲ್ಲಿರುವ ತಕ್ಕ ಜನರು ಕೇವಲ ಅವಿದ್ಯಾವಂತರೂ ಬಡವರೂ ಆಗಿರುವುದರಿಂದ ಪಟ್ಟಣವಾಸಿಗಳಿಗಿಂತ ಹಳ್ಳಿಯವರಿಗೆ ಸಂತಾನ ಹೆಚ್ಚಾಗಿ ಆಗುತ್ತಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಕೆ. ಹೆಗ್ಡೆ.—ಅವಿದ್ಯಾವಂತರನ್ನು ವಿದ್ಯಾವಂತರನ್ನಾಗಿ ಮಾಡಲು ಎಲ್ಲ ತಿಳಿವಳಿಕೆಗಳನ್ನು ಕೊಡಲಾಗುತ್ತಿದೆ. ಪುಸ್ತಕಗಳನ್ನು ಅಚ್ಚು ಹಾಕಿಸಿ ಹಂಚಲಾಗುತ್ತಿದೆ.

ಶ್ರೀ ಎಂ. ರಾಮಪ್ಪ.—ಈಗ ತಾವು ಈ ವ್ಯಾಸಕ್ಟಮಿ ಆಪರೇಷನ್ ಮಾಡಿಸಿಕೊಳ್ಳುತಕ್ಕವರಿಗೆ ಪ್ರತಿಯೊಬ್ಬರಿಗೂ 15 ರಿಂದ 25 ರೂಪಾಯಿಗಳವರೆಗೆ ಕೊಡಲಾಗುತ್ತದೆಂದು ಒಂದು ಹೇಳಿಕೆ ಹೊರಡಿಸಿದ್ದೀರಿ. ಆದರೆ ಈ ಪೊಲಿಸಿಗು ಖಚಿತವಾಗಿ ಎಷ್ಟೆಂಬುದು ನನಗೆ ಗೊತ್ತಿಲ್ಲ. ಆದರೆ ಮದ್ರಾಸಿನಲ್ಲಿ ಒಬ್ಬೊಬ್ಬರಿಗೆ ಈ ಆಪರೇಷನ್ ಮಾಡಿಸಿ ಕೊಂಡವರಿಗೆ 50 ರಿಂದ 75 ರೂಪಾಯಿಗಳವರೆಗೂ ಕೊಡುತ್ತಿದ್ದಾರೆಂದು ಕೇಳು